# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ | : | 184 (209) |
| ಉತ್ತರಿಸಬೇಕಾದ ದಿನಾಂಕ | : | 28.01.2026 |
| ಸದಸ್ಯರ ಹೆಸರು | : | ಶ್ರೀ ನಾಗರಾಜು<br>(ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರ.ಸ. | ಪ್ರಶ್ನೆ | ಉತ್ತರ |
|---|---|---|
| ಅ | ಭೂ ದಾಖಲೆಗಳ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಇಲಾಖೆ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಮತ್ತು ಭೂಮಿ ಪಾದರ್ಶಕತೆಯನ್ನು ಹೇಗೆ ಸುಧಾರಿಸುತ್ತಿದೆ ಮತ್ತು ಪಹಣಿಗಳಲ್ಲಿ (RTC) ದೋಷಗಳನ್ನು ಹೇಗೆ ಕಡಿಮೆ ಮಾಡುತ್ತಿದೆ; (ಮಾಹಿತಿ ನೀಡುವುದು) | ಭೂ ದಾಖಲೆಗಳ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಭೂಮಿ ತಂತ್ರಾಂಶದಲ್ಲಿ ಪ್ರತಿಯೊಂದು ವಹಿವಾಟಿನ ಮೇಲೆ Audit log ನ್ನು ನಿರ್ವಹಿಸಲಾಗುತ್ತಿದೆ, ಹಾಗೂ ಪ್ರತಿಯೊಂದು ಮ್ಯುಟೇಶನ್‌ಗೆ ಡಿಜಿಟಲ್ ಸಹಿ ಮೂಲಕ ಅನುಮೋದನೆ ಮಾಡಲಾಗುತ್ತಿದ್ದು, ಎಲ್ಲಾ ಪಹಣಿ ದಾಖಲೆಗಳನ್ನು Block chain ತಂತ್ರಜ್ಞಾನ ಅಳವಡಿಸಲಾಗಿರುತ್ತದೆ. ಭೂಮಿ ತಂತ್ರಾಂಶದಲ್ಲಿ ಪ್ರತಿಯೊಂದು ಬಳಕೆದಾರರಿಗೆ ಬಯೋಮೆಟ್ರಿಕ್ ಲಾಗಿನ್ ಹಾಗೂ ಆಧಾರ್ ಇ-ಕೆವೈಸಿ ಕಡ್ಡಾಯವಾಗಿರುತ್ತದೆ. ತಂತ್ರಾಂಶವನ್ನು Empanelled Security Audit Agencies ಮೂಲಕ Security Audit ಮಾಡಲಾಗಿರುತ್ತದೆ. ಮುಂದುವರೆದು ಭೂಮಿ ತಂತ್ರಾಂಶವನ್ನು ಕೇವಲ KSWAN ಮೂಲಕ ಮಾತ್ರ ಲಾಗಿನ್ ಆಗಲು ಅವಕಾಶವಿರುತ್ತದೆ. ಅಲ್ಲದೆ ಎಲ್ಲಾ ದತ್ತಾಂಶವನ್ನು KSDC ಮೂಲಕ ನಿರ್ವಹಿಸಲಾಗುತ್ತದೆ. |
| ಆ | ಕೊಡಗು ಜಿಲ್ಲೆಯಲ್ಲಿ ಭೂ ಪರಿವರ್ತನೆ ಮತ್ತು ಪಿತ್ರಾರ್ಜಿತ ಪ್ರಕರಣಗಳನ್ನು ವಿಶೇಷವಾಗಿ ಸಂಕೀರ್ಣ ಅವಿಭಕ್ತ ಕುಟುಂಬ ಹಿಡುವಳಿಗಳು (complex joint family holdings) ಭೂಮಿಗಳಿಗೆ ಸಂಬಂಧಿಸಿದಂತೆ ತ್ವರಿತ ಪರಿಹಾರವನ್ನು ಸಾಧಿಸಲು ಇಲಾಖೆ ವತಿಯಿಂದ ಯಾವ ಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ; | ಕೊಡಗು ಜಿಲ್ಲೆಯಲ್ಲಿ ಭೂ ಕಂದಾಯ ಅಧಿನಿಯಮ, 1964ರ ಕಲಂ 95ರಂತೆ ಭೂ ಪರಿವರ್ತನೆ ಮಾಡಲಾಗುತ್ತಿದೆ.<br><br>ಕರ್ನಾಟಕ ಭೂಕಂದಾಯ ಅಧಿನಿಯಮ, 1964 ರ ಕಲಂ 127(ಇ) ತಿದ್ದುಪಡಿ ಮೂಲಕ, ಕೊಡಗು ಜಿಲ್ಲೆಯಲ್ಲಿ ಜಮ್ಮಾ ಬಾಣೆ ಭೂಮಿಗಳ ಕುರಿತು ಸಂಯುಕ್ತ ಕುಟುಂಬದ ಎಲ್ಲಾ ಹಕ್ಕುದಾರರ ಹೆಸರುಗಳನ್ನು ಒಳಗೊಂಡಂತೆ ಕಂದಾಯ ದಾಖಲೆಗಳಲ್ಲಿ ತಿದ್ದುಪಡಿ, ಸೇರುವಿಕೆ ಮತ್ತು ತೆಗೆದುಹಾಕಲು ಕಾನೂನುಬದ್ಧವಾಗಿ ಸರಿಪಡಿಸುವ ಅವಕಾಶ ಕಲ್ಪಿಸಿದ್ದು ನಿಯಮ ಜಾರಿಯಾದಂತೆ ಕ್ರಮವಹಿಸಲಾಗುವುದು. |
| ಇ | ಅಕ್ರಮ ಭೂ ವ್ಯವಹಾರಗಳು ಮತ್ತು ಭೂ ದಾಖಲೆಗಳ ಸ್ವಷ್ಟೀಕರಣವನ್ನು ತಡೆಯಲು ಇಲಾಖೆ ಕೈಗೊಂಡಿರುವ ಕ್ರಮಗಳು ಯಾವುವು; ಮತ್ತು ಇಂತಹ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಯಾವ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುವುದು? | ರಾಜ್ಯದ ಅಭಿಲೇಖಾಲಯಗಳಲ್ಲಿರುವ ಭೂ ದಾಖಲೆಗಳನ್ನು ನಕಲು ಮಾಡುವುದನ್ನು ತಡೆಯಲು ಭೂ ಸುರಕ್ಷಾ ಯೋಜನೆ ಅಡಿಯಲ್ಲಿ ಗಣಕೀಕರಣ ಕಾರ್ಯವನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಗಣಕೀಕರಣ ಕಾರ್ಯವನ್ನು ಸಿಸಿಟಿವಿ ಕ್ಯಾಮೆರಗಳ ನಿಗ್ರಾಹಣದಲ್ಲಿ ದಾಖಲೆಗಳ ಗಣಕೀಕರಣ ಕೈಗೊಳ್ಳಲಾಗಿದೆ. |

**ಸಂಖ್ಯೆ: ಕಂಇ 38 ಎಂಆರ್‌ಆರ್ 2026**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು